ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ :

47 (506) ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ಚಿನಕುರಳಿ ಸಮುದಾಯ ಆರೋಗ್ಯ ಕೇಂದ್ರವನ್ನು ಉನ್ನತ ದರ್ಜೆಗೇರಿಸಿ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಈ ಆಸ್ಪತ್ರೆಗೆ ವೈದ್ಯರು ಮತ್ತು ಸಿಬ್ಬಂದಿಗಳನ್ನು ನಿಯೋಜಿಸದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಪೂರ್ಣ ಮಾಹಿತಿ ನೀಡುವುದು;

ಆ) ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ಸಮುದಾಯ ಆರೋಪ ಕೇಂದ್ರಗಳ ಸಂಖ್ಯೆ ಎಷ್ಟು; ಈ ಆಸ್ಪತ್ರೆಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಆಸ್ಪತ್ರೆಗಳೆಷ್ಟು; ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ಆಸ್ಪತ್ರೆಗಳೆಷ್ಟು; ಪೂರ್ಣ ಮಾಹಿತಿ ನೀಡುವುದು;

ಇ) ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಪೂರ್ಣ ಪ್ರಮಾಣದಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿಯನ್ನು ತುಂಬಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು; ಪೂರ್ಣ ಮಾಹಿತಿ ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮಂಡ್ಯ ಜಿಲ್ಲೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಚಿನಕುರಳಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರದ 30 ಹಾಸಿಗೆಗಳಿಗೆ ತಕ್ಕಂತೆ ಕಟ್ಟಡ ನಿರ್ಮಿಸಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 1023 ಸಿಜಿಎಂ 2005, ದಿನಾಂಕ: 27-08-2005 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕಟ್ಟಡ ನಿರ್ಮಾಣ ಪೂರ್ಣಗೊಂಡ ನಂತರ ಸಿಬ್ಬಂದಿ ಮಂಜೂರಾತಿ ಹಾಗೂ ಮೇಲ್ದರ್ಜೆಗೇರಿಸಿದ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸದರಿ ಆದೇಶದಲ್ಲಿ ಷರತ್ತು ವಿಧಿಸಲಾಗಿದೆ. 30 ಹಾಸಿಗೆಗಳಿಗೆ ತಕ್ಕಂತೆ ಕಟ್ಟಡ ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆ. ಈ ಬಗ್ಗೆ ಮೇಲ್ದರ್ಜೆಗೇರಿಸುವಿಕೆ ಹಾಗೂ ಸಿಬ್ಬಂದಿ ಮಂಜೂರಾತಿ ಪ್ರಸ್ತಾವನೆ ದಿನಾಂಕ: 27-05-2009 ರಂದು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಸದರಿ

ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲನೆಯಲ್ಲಿದೆ.

ಆ) ಮೇಲುಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ

ಪ್ರಾಥಮಿಕ ಆರೋಗ್ಯ ಕೇಂದ್ರಗಳು –14
ಸಮುದಾಯ ಆರೋಗ್ಯ ಕೇಂದ್ರ –0
ಸ್ವಂತ ಕಟ್ಟಡ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು –12
ಸ್ವಂತ ಕಟ್ಟಡ ಇಲ್ಲದಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು –2

ಜಕ್ಕನಹಳ್ಳಿ ಮತ್ತು ಹಿರೇಮರಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಇ) ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 30 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು 27 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 3 ವೈದ್ಯರ ಹುದ್ದೆಗಳು ಖಾಲಿ ಇವೆ.

ಒಟ್ಟು 272 ಅರೆ ವೈದ್ಯಕೀಯ ಸಿಬ್ಬಂದಿಯ ಹುದ್ದೆಗಳು ಮಂಜೂರಾಗಿದ್ದು, 180 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 92 ಹುದ್ದೆಗಳು ಖಾಲಿ ಇವೆ.

ಈ ಹುದ್ದೆಗಳು ವೈದ್ಯಾಧಿಕಾರಿ/ಸಿಬ್ಬಂದಿಯ ವರ್ಗಾವಣೆ/ ವಯೋನಿವೃತ್ತಿಯಿಂದ ತೆರವಾದ ಹುದ್ದೆಗಳಾಗಿವೆ.

ಇಲಾಖೆಯಲ್ಲಿ ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಮತ್ತು 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದುವರೆದು, ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5021 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿದೆ. ನೇಮಕಾತಿ ಪ್ರಕ್ರಿಯೆ ಮುಗಿದ ನಂತರ, ಖಾಲಿ ಹುದ್ದೆಗಳನ್ನು ಆದ್ಯತಾನುಸಾರ ಭರ್ತಿ ಮಾಡಲಾಗುವುದು.

ಶ್ರೀ ಸಿ.ಎಸ್. ಪುಟ್ಟರಾಜು : ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ರೂ.ಒಂದೂವರೆ ಕೋಟಿ ಖರ್ಚು ಮಾಡಿ ನಮ್ಮಲ್ಲಿ ಒಂದು ವರ್ಷದಲ್ಲಿ ಕಟ್ಟಡವು ಪೂರ್ಣವಾಗಿದೆ. ಸರ್ಕಾರದಿಂದ ಇಲ್ಲಿಯ ತನಕ ಡಾಕ್ಟರ್ ಹಾಗೂ ಸಿಬ್ಬಂದಿಯನ್ನು ನೇಮಿಸುವಂತಹ ಕೆಲಸಗಳು ಆಗಿರುವುದಿಲ್ಲ. ಇವತ್ತು ಹೊಸದಾಗಿ ಕಟ್ಟಿರುವಂತಹ ಕಟ್ಟಡದಲ್ಲಿ ನಾಯಿಗಳು ಮತ್ತು ಹಂದಿಗಳು ವಾಸ ಮಾಡುವಂತಹ ಪರಿಸ್ಥಿತಿಯು ನಿರ್ಮಾಣವಾಗಿದೆ. ಆ ನಿಟ್ಟಿನಲ್ಲಿ ತ್ವರಿತವಾಗಿ ಮಂತ್ರಿಗಳು ಅಲ್ಲಿಗತೆ ಯಾವಾಗ ಡಾಕ್ಟರ್‌ಗಳನ್ನು ನೇಮಿಸುತ್ತೀರಿ, ಆ ಕಟ್ಟಡವನ್ನು ಯಾವಾಗ ಉದ್ಘಾಟನೆ ಯನ್ನು ಮಾಡಿ ಸಾರ್ವಜನಿಕರ ಅನುಕೂಲಕ್ಕಾಗಿ ಯಾವಾಗ ಆ ಕಟ್ಟಡವನ್ನು ಬಿಟ್ಟುಕೊಡುತ್ತೀ ರೆಂದು ಸ್ಪಷ್ಟವಾಗಿ ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಚಿನಕುರಳಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅಲ್ಲಿಗೆ ಬೇಕಾಗಿರು ವಂತಹ specialist, ಮಕ್ಕಳ ತಜ್ಞರು ಆಗಿರಬಹುದು, ಅರೆವಳಿಕೆ ತಜ್ಞರು ಆಗಿರಬಹುದು, CT Scan ತಜ್ಞರು ಆಗಿರಬಹುದು ಇವತ್ತು ನಾವು 50.000 ರೂಪಾಯಿಗಳ ಗೌರವಧನವನ್ನು ಕೊಡುವುದರ ಮೂಲಕ ನಾವು ಮೊನ್ನೆಯೇ decisionನ್ನು ತೆಗೆದುಕೊಂಡಿದ್ದೇವೆ. ನಿಮಗೆ ಬೇಕಾದರೆ ಅಲ್ಲಿ 50.000 ರೂಪಾಯಿಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿಕೊ ಡುತ್ತೇವೆ. ಅಲ್ಲಿ ನೀವು ಬೇಕಾದರೆ specialistನ್ನು ತೆಗೆದುಕೊಳ್ಳಬಹುದು. 815 ಡಾಕ್ಟರ್‌ಗಳನ್ನು ಸಂಪೂರ್ಣವಾಗಿ ಕೆ.ಪಿ.ಎಸ್.ಸಿ. ಯ ಮೂಲಕ ತುಂಬಿಕೊಂಡಿದ್ದು ಈ ರಾಜ್ಯದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಸುಮಾರು 526 ವೈದ್ಯರನ್ನು ತೆಗೆದುಕೊಳ್ಳುವ ಬಗ್ಗೆ ಕೆ.ಪಿ.ಎಸ್.ಸಿ.ಗೆ ಪತ್ರ ಬರೆದಿದ್ದು ಅದು ನೇಮಕಾತಿಯು ಆಗುತ್ತಿದೆ. ನೇಮಕಾತಿಯಾದವರು ಬಂದ ನಂತರ ಆದ್ಯತೆ ಮೇರೆಗೆ, para-medical staff ಮತ್ತು ಏನೇನು ವ್ಯವಸ್ಥೆಯನ್ನು ಮಾಡಿಕೊಡಬೇಕು ಅದನ್ನು ಮಾಡಿಕೊಡುತ್ತೇನೆ Group 'D' ಯವರನ್ನು Out-Sourcing ಮೂಲಕ ವ್ಯವಸ್ಥೆ ಮಾಡಿಕೊಳ್ಳಬಹುದು. ಎಫ್‌ಡಿಸಿ ಬಗ್ಗೆ 224 ಹುದ್ದೆಗಳ ಬಗ್ಗೆ ಕೆ.ಪಿ.ಎಸ್.ಸಿ.ಗೆ ಪತ್ರ ಬರೆದಿದ್ದೇವೆ. ಆದಷ್ಟು ಬೇಗನೆ

ಅಲ್ಲಿಂದ ಬಂದ ತಕ್ಷಣವೆ ಆದ್ಯತೆಯ ಮೇರೆಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟರಾಜು : ಅಲ್ಲಿರುವಂತಹ ಸಮಸ್ಯೆಯನ್ನು ಸರಿಪಡಿಸುತ್ತೇವೆಂದು ಈ ಸದನದ ಮೂಲಕ ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಾನು ಆ ಕ್ಷೇತ್ರದ ಶಾಸಕನಾಗಿ ತಮ್ಮಲ್ಲಿ ಒತ್ತಾಯ ಮಾಡುವುದಿಷ್ಟೆ; ಪಾಂಡವಪುರ ಟೌನ್‌ನಲ್ಲಿ 100-bed hospital ಕಟ್ಟಡವು ಸಂಪೂರ್ಣವಾಗುತ್ತಾ ಬರುತ್ತಿದೆ. ಇವತ್ತು ಕಾಂಪೌಂಡ್ ಕಟ್ಟುವುದಕ್ಕೆ ಅನುದಾನವಿಲ್ಲವೆಂದು ಹೇಳಿ ಇವತ್ತು ಆಟೋ ಸ್ಟ್ಯಾಂಡ್, ಸೈಕಲ್ ಸ್ಟ್ಯಾಂಡ್, ಸ್ಕೂಟರ್‌ನ್ನು ನಿಲ್ಲಿಸುವಂತಹ ವ್ಯವಸ್ಥೆಯು ಆ ಆಸ್ಪತ್ರೆಯ ಆವರಣದಲ್ಲಿ ನಡೆಯುತ್ತಿದೆ. ಇಂತಹ ಅನೇಕ ಸಮಸ್ಯೆಗಳು ಇವತ್ತು ನನ್ನ ಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯ ಆಸ್ಪತ್ರೆಯ ಕಟ್ಟಡಗಳು ಇದೆಯೋ ಎಲ್ಲಾ ಆಸ್ಪತ್ರೆ ಕಟ್ಟಡ ಇರುವಂತಹ ವ್ಯಾಪ್ತಿಯಲ್ಲಿ ಈ ಸಮಸ್ಯೆಯು ಉದ್ಭವವಾಗಿದೆ. ದಯಮಾಡಿ ಸಚಿವರು ಸಂಬಂಧಪಟ್ಟಂತಹ ಮುಖ್ಯಸ್ಥರಿಗೆ ಸೂಚನೆಯನ್ನು ಕೊಟ್ಟು ಅಲ್ಲಿ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಕೊಡುವಂತಹ ವ್ಯವಸ್ಥೆಯಾಗ ಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಏನು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೋ ಅದರ ಬಗ್ಗೆ ನಾನು ಆದಷ್ಟು ಬೇಗನೆ ಆ ಸಮಸ್ಯೆಗೆ ಪರಿಹಾರವನ್ನು ಮಾಡಿಕೊಡುತ್ತೇನೆ.

ಹಜ್ ಭವನ ನಿರ್ಮಾಣ

51 (517) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಲಾದ ಹಜ್ ಭವನ ನಿರ್ಮಾಣ ಪ್ರಕ್ರಿಯೆಯ ವಿವರಗಳೇನು; ಹಜ್ ಭವನಕ್ಕಾಗಿ ಮಂಜೂರಾದ ಜಮೀನಿನ ವಿಸ್ತೀರ್ಣ ಮತ್ತಿತರ ವಿವರಗಳೇನು;

ಆ) ಹಜ್ ಭವನ ನಿರ್ಮಾಣ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಳಿಸಲು ನಿಗದಿಗೊಳಿಸಿದ ಅವಧಿ ಎಷ್ಟು,